ಕರ್ನಾಟಕ ಸರ್ಕಾರ

ಸಂ: ಎಎಲ್‌ಎನ್(ಪೂ) ಎಸ್‌ಆರ್/ 51 /15-16

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 6-6-2016.

-: ಅಧಿಕೃತ ಜ್ಞಾಪನ :-

ವಿಷಯ: ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, **ಶೀಗೇಹಳ್ಳಿ ಗ್ರಾಮದ ಸರ್ವೆ ನಂ.15 ರಲ್ಲಿ 1-01.04 + 1-01.04 = 2-02.08 ಎಕರೆ/ಗುಂಟೆ ಪೈಕಿ 1-39 ಎಕರೆ/ಗುಂಟೆ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಗುಂಟೆ** ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ **ಉದ್ಯಾನವನದ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ **ಶ್ರೀ ಬಾಲಾಜಿ (ಮೈ.ಗಾ. ತಂದೆ ಅಶ್ವಥನಾರಾಯಣ) ಬಿನ್ ಅಶ್ವಥನಾರಾಯಣ ಮತ್ತು ಹೃತಿಕ್ ಬಿನ್ ಮಂಜುನಾಥ, ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-49** ರವರು ಸಲ್ಲಿಸಿರುವ ಅರ್ಜಿ ದಿನಾಂಕ 4-3-2016

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.7 ಎಲ್‌ಜಿಪಿ 95 ದಿನಾಂಕ: 07-06-1999
2 ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ. 2008 ದಿನಾಂಕ: 10-9-2008 ಮತ್ತು 24-9-2008
3. ತಹಶೀಲ್ದಾರ್. ಬೆಂಗಳೂರು ಪೂರ್ವ ತಾಲ್ಲೂಕು ರವರ ವರದಿ ಸಂಖ್ಯೆ: ಎ.ಎಲ್‌ಎನ್ ಸಿಆರ್/ 31/15-16 ದಿನಾಂಕ 31-3-2016
4 ಭೂ ಪರಿವರ್ತನಾ ಶುಲ್ಕ ರೂ.1,07,539-00 ಮತ್ತು 0-03.08 ಗುಂಟೆ ಉದ್ಯಾನವನದ ಉದ್ದೇಶಕ್ಕೆ ರೂ.15,246-00 ಮತ್ತು ಪೋಡಿ ಶುಲ್ಕ ರೂ. 55-00 ಒಟ್ಟು ರೂ.1,22,840-00 ಗಳನ್ನು ಚಲನ್ ನಂ.12 & 13 ದಿನಾಂಕ 31-5-2016 ರಂದು ಎಸ್.ಬಿ.ಎಂ. ಕೆ.ಆರ್.ಪುರ ಶಾಖೆ, ಬೆಂಗಳೂರು ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ.
5 ಸಹಾಯಕ ನಿರ್ದೇಶಕರು, ನಗರ ಯೋಜನಾ ವಿಭಾಗ, ಬೆಂ.ಅ.ಪ್ರಾ, ಬೆಂಗಳೂರು ರವರ ಪತ್ರ ಸಂ.ಬೆಂಅಪ್ರಾ/ ನಯೋಸ/ಸಿಓಎಸ್-38/50/2016-17 ದಿನಾಂಕ 13-4-2016 ಮತ್ತು ಉಪ ಆಯುಕ್ತರು (ಭೂ.ಸ್ವಾ), ಬೆಂ.ಅಪ್ರಾ, ಬೆಂಗಳೂರು ರವರ ಪತ್ರ ಸಂ. ಬೆಂಅಪ್ರಾ /ಉಪ(ಭೂಸ್ವಾ)/ 56/2015-16 ದಿನಾಂಕ 15-4-2016, ವಿಶೇಷ ಭೂಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂ.ಎಸ್‌ಎಲ್‌ಎಓ/ಜಿಎಲ್/245/16-17 ದಿನಾಂಕ 3-5-2016 ಮತ್ತು ವಿಶೇಷ ಭೂಸ್ವಾಧೀನಾಧಿಕಾರಿ-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ಬೆಂಗಳೂರು ರವರ ಪತ್ರ ಸಂ.ಬೆಂಗಳೂರು/ವಿಭೂಸ್ವಾಅ/373/16-17 ದಿನಾಂಕ 6-5-2016

****

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2),95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ಉದ್ಯಾನವನದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.1,74,240-00 (ಒಂದು ಲಕ್ಷದ ಎಪ್ಪತ್ನಾಲ್ಕು ಸಾವಿರದ ಎರಡುನೂರಾ ನಲವತ್ತು ರೂಪಾಯಿಗಳು ಮಾತ್ರ) ಮತ್ತು ವಾಸದ ಉದ್ದೇಶಕ್ಕೆ ರೂ.54,450/- (ಐವತ್ನಾಲ್ಕು ಸಾವಿರದ ನಾಲ್ಕುನೂರಾ ಐವತ್ತು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ **ಅರ್ಜಿದಾರರಾದ ಶ್ರೀ ಬಾಲಾಜಿ (ಮೈ.ಗಾ. ತಂದೆ ಅಶ್ವಥನಾರಾಯಣ) ಬಿನ್ ಅಶ್ವಥನಾರಾಯಣ ಮತ್ತು ಹೃತಿಕ್ ಬಿನ್ ಮಂಜುನಾಥ ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ** ತಾಲ್ಲೂಕು, **ಬೆಂಗಳೂರು-49** ರವರ ಅರ್ಜಿಯನ್ನು ಪರಿಗಣಿಸಿ ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರ ಹೋಬಳಿ, **ಶೀಗೇಹಳ್ಳಿ ಗ್ರಾಮದ ಸರ್ವೆ ನಂ.15 ರಲ್ಲಿ 1-01.04 + 1-01.04 = 2-02.08 ಎಕರೆ/ಗುಂಟೆ ಪೈಕಿ 1-39 ಎಕರೆ/ಗುಂಟೆ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ಉದ್ಯಾನವನದ** ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1 ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಐ.ಸಿ.ಎ.ಪಿ.ಎ /ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

---2

2 ಈ ಭೂ ಪರಿವರ್ತಿತ ಜಮೀನನ್ನು ವ್ಯವಸಾಯೇತರ **ವಾಸದ/ಉದ್ಯಾನವನದ** ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು, ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3 ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ ಬಿಐಎಪಿಪಿಎ/ ಬಿಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ), ಬಿ.ಎಂ.ಐ.ಸಿ.ಎ.ಪಿ.ಎ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4 ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ ನಿವೇಶನ , ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿ.ಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5 ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೊಂದಾವಣಾಧಿಕಾರಿಗಳಿಂದ/ಉಪನೋಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಪೂರಾ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6 ಸಾರ್ವಜನಿಕ ಹಿತದೃಷ್ಠಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7 **ಸ.ನಂ.15 ರಲ್ಲಿ ಕಾಲುದಾರಿ ಬಗ್ಗೆ 0–03.08 ಗುಂಟೆ ಬಿ ಖರಾಬಿದ್ದು, ಇದನ್ನು ಸರ್ಕಾರಕ್ಕೆ ಕಾಯ್ದಿರಿಸಲಾಗಿದೆ. ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.**

8 ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:7556–665 ಆರ್ ಮತ್ತು ಬಿ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1/7(11) 67, ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9 ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ,ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಯ ಅನುಮತಿ ಹೊಂದಿರತಕ್ಕದ್ದು.

10 ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11 ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12 ಪರಿಷ್ಕೃತ ಮಾಸ್ಟರ್ ಪ್ಲಾನ್ –2015 ರಲ್ಲಿ ಸೂಕ್ಷ್ಮ ವಲಯ (Sensitive Zone) ನಲ್ಲಿ ಬರುವ ಪ್ರದೇಶಗಳಿಗೆ , ಸಂಬಂದಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು.

13 ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

14 ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತ ಜ್ಞಾಪನ ಪಡೆದಿರುವುದು ಸ್ಪಷ್ಟಪಟ್ಟಲ್ಲಿ ತನ್‌ತಾನೆ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

15 ಪ್ರಶ್ನಿತ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ, ತಕ್ಷಣವೇ ಪಕ್ಕ ಪೋಡಿ ಮಾಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

—3

16 ಪ್ರಶ್ನಿತ ಜಾಗದಲ್ಲಿ ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

17 ಉಲ್ಲೇಖ (5) ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು ದಿನಾಂಕ 13-4-2016 ರ ಪತ್ರದಲ್ಲಿ ತಿಳಿಸಿರುವ ಷರತ್ತಿಗೆ ಒಳಪಡಿಸಿದೆ.

18 ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

:: **ಷೆಡ್ಯೂಲ್ ವಿವರ** ::

ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, **ಶೀಗೇಹಳ್ಳಿ ಗ್ರಾಮದ ಸರ್ವೆ ನಂ.15** ರಲ್ಲಿ **1-01.04 + 1-01.04 = 2-02.08 ಎಕರೆ/ಗುಂಟೆ ಪೈಕಿ 1-39 ಎಕರೆ/ಗುಂಟೆ ವಾಸದ ಉದ್ದೇಶಕ್ಕಾಗಿ** ಹಾಗೂ **0-03.08 ಗುಂಟೆ** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ಉದ್ಯಾನವನದ** ಉದ್ದೇಶಕ್ಕೆ ಭೂ ಪರಿವರ್ತಿತ ಜಮೀನಿಗೆ **ಚಕ್ಕುಬಂದಿ**

| ಸ.ನಂ. | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|
| 15 | ಸ.ನಂ.14 ರ ಜಮೀನು | ಸ.ನಂ.16 ರ ಜಮೀನು | ಸ.ನಂ.51 ರ ಜಮೀನು | ಸ.ನಂ.15 ರ ಉಳಿಕೆ ಜಮೀನು & ರಸ್ತೆ |

(ವಿ. ಶಂಕರ್)
ಜಿಲ್ಲಾಧಿಕಾರಿಗಳು
ಬೆಂಗಳೂರು ಜಿಲ್ಲೆ, ಬೆಂಗಳೂರು.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-</u>

1) ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಮೇಲ್ಕಂಡ ಅಧಿಕೃತ ಜ್ಞಾಪನ ಮತ್ತು ಚಲನ್ ಹಾಗೂ ಕರಾರು ಪತ್ರದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರಸ್ತೆ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5) ಉಪ ನೊಂದಣಾಧಿಕಾರಿಗಳು, ಕೆ.ಆರ್.ಪುರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6) ಅರ್ಜಿದಾರರಾದ **ಶ್ರೀ ಬಾಲಾಜಿ (ಮೈಗಾ. ತಂದೆ ಅಶ್ವಥನಾರಾಯಣ) ಬಿನ್ ಅಶ್ವಥನಾರಾಯಣ ಮತ್ತು ಹೃತಿಕ್ ಬಿನ್ ಮಂಜುನಾಥ, ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-49** ರವರಿಗೆ ಮಾಹಿತಿಗಾಗಿ.
7) ಹೆಚ್ಚಿನ ಪ್ರತಿ

Applied On 20-03-17
Compared By
Ready On 21-03-17
Delivered 23/3/17
No. 2618 1/6-17

"ಧೃಢೀಕೃತ ಪ್ರತಿ"
ಜಿಲ್ಲಾಧಿಕಾರಿಗಳ ಕಛೇರಿ

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

ಕರ್ನಾಟಕ ಸರ್ಕಾರ

ನಂ:ಎಎಲ್ಎನ್(ಪೂ)ಎಸ್ಆರ್/ 51 /15-16

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿನಾಂಕ: 28-5-2016.

:: ತಿಳುವಳಿಕೆ ಪತ್ರ ::

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, **ಶೀಗೇಹಳ್ಳಿ ಗ್ರಾಮದ ಸರ್ವೆ ನಂ.15 ರಲ್ಲಿನ 1-01.04 + 1-01.04 = 2-02.08 ಎಕರೆ/ಗುಂಟೆ ಪೈಕಿ 1-39 ಎಕರೆ/ಗುಂಟೆ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಗುಂಟೆ** ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ **ಉದ್ಯಾನವನದ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂಖ್ಯೆ:ಎಎಲ್ಎನ್ ಸಿಆರ್/ 31/15-16 ದಿನಾಂಕ 31-3-2016

ನೀವು ಭೂ ಪರಿವರ್ತನೆ ಕೋರಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, **ಶೀಗೇಹಳ್ಳಿ ಗ್ರಾಮದ ಸರ್ವೆ ನಂ.15 ರಲ್ಲಿನ 1-01.04 + 1-01.04 = 2-02.08 ಎಕರೆ/ಗುಂಟೆ ಪೈಕಿ 1-39 ಎಕರೆ/ಗುಂಟೆ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಗುಂಟೆ** ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ **ಉದ್ಯಾನವನದ** ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿದೆ ಹಾಗೂ ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂ ಪರಿವರ್ತನಾ ಶುಲ್ಕವನ್ನು ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ. 100-00 (ರೂಪಾಯಿ ಒಂದು ನೂರು ಮಾತ್ರ)ಛಾಪಾ ಕಾಗದದಲ್ಲಿ ಕರಾರು ಪತ್ರದೊಂದಿಗೆ ಚಲನ್/ಡಿಡಿ ಅನ್ನು 15 ದಿವಸದೊಳಗಾಗಿ ಹಾಜರುಪಡಿಸುವುದು.

2)ಅಂತಿಮವಾಗಿ ಅಧಿಕೃತ ಜ್ಞಾಪನ ನೀಡುವವರೆಗೆ ಭೂ ಪರಿವರ್ತನೆ ಬಗ್ಗೆ ಈ ನೋಟೀಸು ಯಾವುದೇ ಹಕ್ಕನ್ನು ನೀಡುವುದೆಂದು ಭಾವಿಸತಕ್ಕದ್ದಲ್ಲ.

3)ಭೂ ಪರಿವರ್ತನೆ ಕೋರಿರುವ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ ಭೂ ಪರಿವರ್ತನಾ ಶುಲ್ಕ ಪಾವತಿಸುವುದಕ್ಕೆ ಮುಂಚಿತವಾಗಿ ಈ ನೋಟೀಸು ತಲುಪಿದ 7 ದಿನಗಳೊಳಗಾಗಿ ಭೂ ಮಂಜೂರಾತಿ ಆದ ಬಗ್ಗೆ ದೃಢೀಕೃತ ದಾಖಲೆಗಳನ್ನು ಈ ಕಛೇರಿಗೆ ಹಾಜರುಪಡಿಸಿ ಸ್ವೀಕೃತಿ ಪತ್ರ ಪಡೆಯತಕ್ಕದ್ದು.

4)ಭೂ ಪರಿವರ್ತನೆಗೆ ಕೋರಿರುವ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ ತಕ್ಷಣವೇ ಪಕ್ಕಾ ಪೋಡಿ ಮಾಡಿಸಿಕೊಂಡು ದಾಖಲೆಗಳನ್ನು ಹಾಜರುಪಡಿತಕ್ಕದ್ದು.

5)ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ನೋಟೀಸು ಪಡೆದಿರುವುದು ಸ್ಪಷ್ಟಪಟ್ಟಲ್ಲಿ ಇನ್ನಾವುದೇ ತಿಳುವಳಿಕೆ ಇಲ್ಲದೆ ಈ ನೋಟೀಸು ತನ್ನಿಂತಾನೇ ರದ್ದುಗೊಳ್ಳುತ್ತದೆ ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

6)ನಿಗದಿಪಡಿಸಿದ ಅವಧಿಯಲ್ಲಿ ಭೂ ಪರಿವರ್ತನೆ ಶುಲ್ಕ ಪಾವತಿಸಿದ ಬಗ್ಗೆ ಚಲನ್/ಡಿಡಿ ಮತ್ತು ಕರಾರು ಪತ್ರ, ಅನುಮೋದನೆ ಪತ್ರ, ಹಾಜರುಪಡಿಸದಿದ್ದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು.

| ಸರ್ವೆ ನಂಬರ್ | ವಿಸ್ತೀರ್ಣ ಎಕರೆ/ಗುಂಟೆ | ಹಣ ಪಾವತಿ ವಿವರ | ಮೊಬಲಗು ರೂ. ಪೈಸೆ |
|---|---|---|---|
| 15 | 1-39<br>0-03.08 | 1) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ ವಾಸದ **ಉದ್ದೇಶಕ್ಕೆ ಎಕರೆಗೆ ರೂ.54,450-00** ರಂತೆ<br>2) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ **ಉದ್ಯಾನವನದ ಉದ್ದೇಶಕ್ಕೆ ಎಕರೆಗೆ ರೂ.1,74,240-00** ರಂತೆ<br>3) ಪೋಡಿ ಶುಲ್ಕ ರೂ. 55-00 ರಂತೆ. | 1,07,539-00<br>15,246-00<br>55-00 |
| ಒಟ್ಟು | 2-02.08 | | **1,22,840-00** |

(ಒಂದು ಲಕ್ಷದ ಇಪ್ಪತ್ತೆರಡು ಸಾವಿರದ ಎಂಟುನೂರಾ ನಲವತ್ತು ರೂಪಾಯಿಗಳು ಮಾತ್ರ)

ಜಿಲ್ಲಾಧಿಕಾರಿಗಳ ಪರವಾಗಿ,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಶ್ರೀ ಬಾಲಾಜಿ (ಮೈ.ಗಾ. ತಂದೆ ಅಶ್ವಥನಾರಾಯಣ) ಬಿನ್ ಅಶ್ವಥನಾರಾಯಣ ಮತ್ತು
ಹೃತಿಕ್ ಬಿನ್ ಮಂಜುನಾಥ
ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ,
ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-49.

ಕೆ.ಆರ್.ಪುರ ನಲ್ಲಿರುವ ಎಸ್.ಬಿ.ಎಂ ಬ್ಯಾಂಕ್/ಖಜಾನೆಯಲ್ಲಿ ಪಾವತಿಸಿದೆ

| ಖಜಾನೆ ಕೋಡು | ಡ್ರಾ.ಅ.ಕೋಡು | ದಿನಾಂಕ | ನಗದು/ಹಣ ಚಲನ್ |
|---|---|---|---|
| 0 1 0 3 | RD 0 0 0 8 | 28 05 2016 | 13 |
| ಪಾವತಿದಾರನ ಹೆಸರು: | ಶ್ರೀ ಬಾಲಾಜಿ(ಮೈ.ಗಾ ತಂದೆ ಅಶ್ವಥನಾರಾಯಣ)ಬಿನ್ ಅಶ್ವಥನಾರಾಯಣ, ಪ್ರತೀಕ್ ಬಿನ್ ಮಂಜುನಾಥ | | |
| ವಿಳಾಸ: | ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ, ಬೆಂ,ಪೂ, ತಾ-49 | | |

**ಪಾವತಿಯ ಉದ್ದೇಶ:** ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೇಹಳ್ಳಿ ಗ್ರಾಮದ ಸ.ನಂ:15 ರಲ್ಲಿನ 1-01.04 + 1-01-04 =2-02.08 ಎ/ಗು ಪೈಕಿ 1-39 ಎ/ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಉದ್ಯಾನವನ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

ಸರಿಯಾಗಿದೆ ಹಣ ಸ್ವೀಕರಿಸಿ

**ಲೆಕ್ಕದ ಬಾಬಿನ ವಿವರ:** ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ತಿಳುವಳಿಕೆ ಪತ್ರ ಸಂಖ್ಯೆ:ಎಎಲ್ಎನ್(ಪೂ)ಎಸ್.ಆರ್:51/15-16 ದಿನಾಂಕ:28.05.2016

ಅಧಿಕಾರಿಯ ಸಹಿ ಮತ್ತು ಪದನಾಮ
ಬೆಂಗಳೂರು ಪೂರ್ವ ತಾಲ್ಲೂಕು, ತಹಶೀಲ್ದಾರ್

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | ಮೊಬಲಗು ರೂ. |
|---|---|---|
| ಭೂ ಪರಿವರ್ತನಾ ಶುಲ್ಕ | 2 0 2 9 0 0 1 0 1 1 0 1 | 1,07,539=00 |
| ಉದ್ಯಾನವನ | | 15,246=00 |
| | ಒಟ್ಟು ಮೊತ್ತ | 1,22,785=00 |

ಒಂದು ಲಕ್ಷದ ಇಪ್ಪತ್ತೆರಡು ಸಾವಿರದ ಏಳನೂರ ಎಂಬತ್ತೈದು ರೂಪಾಯಿಗಳು ಮಾತ್ರ

ತಾರೀಖು:28.05.2016

ಸ್ಥಳ:ಕೆ.ಆರ್.ಪುರ

ಪಾವತಿದಾರನ ಸಹಿ

ರೂ. ......... ರೂಪಾಯಿಗಳು ಮಾತ್ರ ಸ್ವೀಕರಿಸಿದೆ.

ಖಜಾಂಚಿ ಲೆಕ್ಕಪಾಲ ಖಜಾನೆ/ಬ್ಯಾಂಕ್ ಅಧಿಕಾರಿ

STATE BANK OF MYSORE, K.R. PURAM BRANCH, 31 MAY 2016, CASH RECEIVED

---

| ಖಜಾನೆ ಕೋಡು | ಡ್ರಾ.ಅ.ಕೋಡು | ದಿನಾಂಕ | ನಗದು/ಹಣ ಚಲನ್ |
|---|---|---|---|
| 0 1 0 3 | RD 0 0 0 8 | 28 05 2016 | 12 |
| ಪಾವತಿದಾರನ ಹೆಸರು: | ಶ್ರೀ ಬಾಲಾಜಿ(ಮೈ.ಗಾ ತಂದೆ ಅಶ್ವಥನಾರಾಯಣ)ಬಿನ್ ಅಶ್ವಥ ನಾರಾಯಣ, ಪ್ರತೀಕ್ ಬಿನ್ ಮಂಜುನಾಥ | | |
| ವಿಳಾಸ: | ಮೇಡಹಳ್ಳಿ ಗ್ರಾಮ ಮತ್ತು ಅಂಚೆ, ಬಿದರಹಳ್ಳಿ ಹೋಬಳಿ, ಬೆಂ,ಪೂ, ತಾ-49 | | |

**ಪಾವತಿಯ ಉದ್ದೇಶ:** ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಶೀಗೇಹಳ್ಳಿ ಗ್ರಾಮದ ಸ.ನಂ:15 ರಲ್ಲಿನ 1-01.04 + 1-01-04 =2-02.08 ಎ/ಗು ಪೈಕಿ 1-39 ಎ/ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಹಾಗೂ 0-03.08 ಉದ್ಯಾನವನ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

ಸರಿಯಾಗಿದೆ ಹಣ ಸ್ವೀಕರಿಸಿ

**ಲೆಕ್ಕದ ಬಾಬಿನ ವಿವರ:** ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ತಿಳುವಳಿಕೆ ಪತ್ರ ಸಂಖ್ಯೆ:ಎಎಲ್ಎನ್(ಪೂ)ಎಸ್.ಆರ್:51/15-16 ದಿನಾಂಕ:28.05.2016.

ಅಧಿಕಾರಿಯ ಸಹಿ ಮತ್ತು ಪದನಾಮ
ಬೆಂಗಳೂರು ಪೂರ್ವ ತಾಲ್ಲೂಕು, ತಹಶೀಲ್ದಾರ್

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | ಮೊಬಲಗು ರೂ. |
|---|---|---|
| ಪೋಡಿ ದಂಡ ಶುಲ್ಕ | 2 0 2 9 0 0 1 0 1 1 0 3 | 55=00 |
| | ಒಟ್ಟು ಮೊತ್ತ | 55=00 |

ಐವತ್ತೈದು ರೂಪಾಯಿಗಳು ಮಾತ್ರ

ತಾರೀಖು:28.05.2016

ಸ್ಥಳ:ಕೆ.ಆರ್.ಪುರ

ಪಾವತಿದಾರನ ಸಹಿ

ರೂ. ......... ರೂಪಾಯಿಗಳು ಮಾತ್ರ ಸ್ವೀಕರಿಸಿದೆ.

ಖಜಾಂಚಿ ಲೆಕ್ಕಪಾಲ ಖಜಾನೆ/ಬ್ಯಾಂಕ್ ಅಧಿಕಾರಿ


STATE BANK OF MYSORE, K.R. PURAM BRANCH, SBM 31 MAY 2016, CASH RECEIVED

PAN-BKVPA 3328J

Challan

ಗ್ರಾಮ:- ಶೀಗೇಹಳ್ಳಿ ಹೋಬಳಿ:- ಕೆ.ಆರ್.ಪುರಂ ತಾಲ್ಲೂಕು:-ಬೆಂಗಳೂರು ಪೂರ್ವ

ರೀ.ಸ.ನಂ 15 ರ ಭೂಪರಿವರ್ತನೆ ಮಂಜೂರಾತಿ ಕೋರಿರುವ ಬಗ್ಗೆ ತಯಾರಿಸಿದ ಬಾಬ್ತು ನಕ್ಷೆ.




1. ▭ ಈ ಬಣ್ಣದಿಂದ ನಕ್ಷೆಯಲ್ಲಿ ತೋರಿಸಿರುವಂತೆ ರೀ.ಸ.ನಂ. 15 ರ ಪೈಕಿ ವಿಸ್ತೀರ್ಣ

| ಐನ್ | ಖರಾಬು | ಬಾಕಿ |
|---|---|---|
| A-G | A-G | A-G |
| 2-06 | 0-03.1/2 | 2-02.1/2 |

ಪ್ರದೇಶವನ್ನು ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಬಗ್ಗೆ ಕೋರಿರುವಂತೆ ಪ್ರದೇಶವಾಗಿರುತ್ತದೆ.

ಸದರಿ ಪ್ರದೇಶವು ಸಿ.ಡಿ.ಪಿ. ನಕ್ಷೆಯಲ್ಲಿ ವಾಸದ ವಲಯದಲ್ಲಿ ಬರುತ್ತದೆ.

ಈ ಬಣ್ಣದಿಂದ ನಕ್ಷೆಯಲ್ಲಿ ತೋರಿಸಿರುವ ಪ್ರದೇಶದಲ್ಲಿ 0.03.1/2 ಹೈಟೆಕ್ಷನ್ ಲೈನ್ ಹಾದುಹೋಗಿರುತ್ತದೆ.

ಭೂಪರಿವರ್ತನೆ ಕೋರಿರುವ ಪ್ರದೇಶದಲ್ಲಿ ಆಕಾರಬಂದಿನಂತೆ ಕಾಲುದಾರಿ ಬಗ್ಗೆ 0.03.1/2 ಗುಂಟೆ ಖರಾಬು ಇರುತ್ತದೆ.

2. ▨ ಈ ಬಣ್ಣದಿಂದ ನಕ್ಷೆಯಲ್ಲಿ ತೋರಿಸಿರುವಂತೆ ಭೂಪರಿವರ್ತನೆ ಮಂಜೂರಾತಿ ಕೋರಿರುವ ಪ್ರದೇಶಕ್ಕೆ ಇರುವ ದಾರಿ

ಭೂಪರಿವರ್ತನೆ ಕೋರಿರುವ ಪ್ರದೇಶಕ್ಕೆ ಚೆಕ್ಕುಬಂದಿ

ಪೂರ್ವಕ್ಕೆ :- ಸ.ನಂ 14 ರ ಜಮೀನು
ಪಶ್ಚಿಮಕ್ಕೆ :- ಸ.ನಂ 16 ರ ಜಮೀನು
ಉತ್ತರಕ್ಕೆ :- ಸ.ನಂ 51 ರ ಜಮೀನು
ದಕ್ಷಿಣಕ್ಕೆ :- ಸ.ನಂ 15 ರ ಉಳಿಕೆ ಜಮೀನು&ರಸ್ತೆ

ತಯಾರಿಸಿದವರು

ಬೆಂಗಳೂರು ಪೂರ್ವ ತಾಲ್ಲೂಕು
ಕೃಷ್ಣರಾಜಪುರ

ತಾಲ್ಲೂಕು ಸರ್ವೇಯರ್
ಬೆಂಗಳೂರು ಪೂರ್ವ ತಾಲ್ಲೂಕು
ಕೆ. ಆರ್ ಪುರಂ